ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಸಿಸಿ 1349/2023

| | | |
|---|---|---|
| ಸಾಕ್ಷಿದಾರರ ಹೆಸರು | - ಶಿವು | ಚಾಸಾ-3 |
| ತಂದೆಯ ಹೆಸರು | - ರಾಜು | ಫ್ರಾಸಾ-2 |
| ವಯಸ್ಸು | - 20 ವರ್ಷ | |
| ಉದ್ಯೋಗ | - ವಿದ್ಯಾರ್ಥಿ | |
| ವಾಸಸ್ಥಳ | - ಕೆ.ಬೆಳ್ಳೂರು | |

ದಿನಾಂಕಃ- 24-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎಪಿಪಿ ರವರಿಂದಃ-**

ನನಗೆ ಚಾಸಾ-1, 2 ರವರ ಪರಿಚಯವಿರುತ್ತದೆ. ಮೃತ ಪುಟ್ಟಸ್ವಾಮಿ ರವರ ಪರಿಚಯವಿರುತ್ತದೆ. ನಾನು ಗಾಯಾಳುವನ್ನು ಉಪಚರಿಸಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ, ಅಪಘಾತದ ಬಗ್ಗೆ ನನಗೆ ಯಾರು ಮಾಹಿತಿ ನೀಡಿಲ್ಲ, ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-**

ನೀವು ಮತ್ತು ಚಾಸಾ-1 ರವರು ಮನೆಯಲ್ಲಿದ್ದಾಗ ದಿ 15-07-2023 ರಂದು ಸಂಜೆ 4.10 ಗಂಟೆ ಸಮಯದಲ್ಲಿ ಚಾಸಾ-2 ರವರು ಚಾಸಾ-1 ರವರೆ ಕರೆ ಮಾಡಿ, ನಿಮ್ಮ ತಂದೆ ಪುಟ್ಟಸ್ವಾಮಿ ರವರು ರುದ್ರಾಕ್ಷಿಪುರ ಕಡೆಯಿಂದ ಕೆ ಬೆಳ್ಳೂರು ಗ್ರಾಮದ ಕಡೆ ಹೊನ್ನಲಗೆರೆ ಗ್ರಾಮದ ಪ್ರಕಾಶ್ ರವರ ಇಟ್ಟಿಗೆ ಪ್ಯಾಕ್ಟರಿ ಗೂಡಿನ ಹತ್ತಿರ ಚಾಲನೆ ಮಾಡಿಕೊಂಡು ಬರುತ್ತಿದ್ದಾಗ, ಅದೇ ಸಮಯಕ್ಕೆ ಎದುರುಗಡೆಯಿಂದ ಕೆಎ-11 ಸಿ-1824 ಟಾಟಾ ಏಡ್ಸ್ ವಾಹನದ ಚಾಲಕ ತನ್ನ ಬಾಬ್ತು ವಾಹನವನ್ನು ಚಾಲಕನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಮೃತ ಪುಟ್ಟಸ್ವಾಮಿ ರವರಿಗೆ ಡಿಕ್ಕಿಪಡಿಸಿರುತ್ತಾರೆಂದು ನಿಮಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ಇದರಿಂದಾಗಿ ಪುಟ್ಟಸ್ವಾಮಿ ರವರು ಕೆಳಗೆ ಬಿದ್ದು ಹೋಗಿದ್ದು, ತೀವ್ರ ಸ್ವರೂಪದಲ್ಲಿ ಪೆಟ್ಟಾಗಿ ರಕ್ತಗಾಯ ಉಂಟಾಗಿದ್ದು, ಅವರನ್ನು ಮದ್ದೂರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ನಿಮಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ನಂತರ ಮದ್ದೂರು ಸರ್ಕಾರಿ ಆಸ್ಪತ್ರೆಗೆ ನೀವು ಬಂದು ನೋಡಲಾಗಿ ಪುಟ್ಟಸ್ವಾಮಿ ರವರಿಗೆ ಅಪಘಾತದಿಂದಾಗಿ ಗಾಯಗಳು ಆಗಿರುವುದು ನಿಜವಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ನೀವು ಮತ್ತು ಚಾಸಾ-1 ರವರು ಹೆಚ್ಚಿನ ಚಿಕಿತ್ಸೆಗಾಗಿ ಪುಟ್ಟಸ್ವಾಮಿ ರವರನ್ನು ಮಂಡ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಅದೇದಿನ ಸಂಜೆ ಸಮಯದಲ್ಲಿ ಪುಟ್ಟಸ್ವಾಮಿ ರವರು ಮೃತಪಟ್ಟಿರುತ್ತಾರೆಂದರೆ ಸರಿಯಲ್ಲ.

ಸದರಿ ಗಲಾಟೆಯ ಹಿನ್ನಲೆಯಲ್ಲಿ ನೀವು ಪೊಲೀಸರಿಗೆ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಮಗೆ ನಿಪಿ-2 ರಲ್ಲಿರುವ ವಿಚಾರಗಳು ಎಲ್ಲಾ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ.ಜಿಎನ್ ಎಸ್ ವಕೀಲರಿಂದಃ-**

ಏನು ಇಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)
ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ